ಅಧ್ಯಕ್ಷರು.—ಮಾಡಬೇಡವೆ ?

ಶ್ರೀ ದೇವರಾಜ ಅರಸ್.—ಸಿಮೆಂಟ್-ಕಾರ್ಕ್ರೀಟ್ ಇನ್ನಾವ ಕಡೆ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎ. ಆರ್. ನಾಯ್ಡು.—ಮಾನ್ಯ ಸದಸ್ಯರು ಜುನಾವಣೆಗೆ ನಿಂತು ಬಂದ ಸ್ಥಳಗಳಲ್ಲಿ ಹೆಚ್ಚು ಹಣ ಖರ್ಚಾಗಿದೆಯೆಂಬುದು ಗಮನಕ್ಕೆ ಬಂದಿದೆಯೆ! (ನಗು!) (ಉತ್ತರವಿಲ್ಲ).

ಶ್ರೀ ಎ. ಆರ್. ನಾಯ್ಡು.—ಶಿವಮೊಗ್ಗ-ಚಿಕ್ಕಮಗಳೂರು ರಸ್ತೆಯಲ್ಲಿ ಮೆಟೀರಿಯಲ್ಸ್ ಕಲೆಕ್ಟ್ ಮಾಡಿದ್ದುದರಿಂದ ತಾನೆ ಅದನ್ನು ಮಾಡಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿದ್ದಪ್ಪ.—ಪ್ರತಿ ವರ್ಷವೂ ಸಂಸ್ಥಾನಾಮಳೆ ರಸ್ತೆಗಳಿಗೆ ಒದಗಿಸುವ ಹಣ ಖರ್ಚಾಗುತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಮಟ್ಟಿಗೆ ಖರ್ಚಾಗುತ್ತಿದೆ.

ಶ್ರೀ ಎಸ್. ಸಿದ್ದಪ್ಪ.—ಖರ್ಚಾಗುತ್ತಿಲ್ಲವೆಂದು ಅರ್ಥವಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ತಾವು ಪ್ರವಾಸ ಮಾಡುವಾಗ ಹೆಚ್ಚು ರಸ್ತೆಗಳು ಕೆಟ್ಟುಹೋಗಿವೆ ಎಂಬುದು ತಮ್ಮ ಗಮನಕ್ಕೆ ಬರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಹೊನಕೋಟೆ-ಚಿಂತಾಮಣಿ ರಸ್ತೆಯಲ್ಲಿ ಪ್ರವಾಸ ಬಂದಾಗ ಆ ರಸ್ತೆಗಳ ಪರಿಸ್ಥಿತಿ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

Amildars with particular reference to Depressed Classes.

Q.—79. **Sri G. PUTTASWAMY** (Chikmagalur-Mudigere—Scheduled Castes).—

Will the Government be pleased to state :—

(*a*) the total number of Amildars with names who are confirmed as such up to the 15th of June 1953 in the State ;

(*b*) the names of the Amildars belonging to the Depressed Classes who are—

(i) confirmed ;

(ii) still acting up to the said date under (*a*) *supra* ;

(*c*) the ranking serial numbers (as per the latest Civil List) of the Amildars belonging to Depressed Classes in the State ?

A.— **Sri Kadidal MANJAPPA** (Minister for Revenue and Public Works).—

(*a*) 52. Statement appended below.

(*b*) (i) Sri K. Madaiah.

(ii) 1. Sri C. Rachaiah—*S.P.T.*
2. „ H. Hanumaiah.
3. „ V. Nanjaiah.
4. „ M. Puttaswamy.

(*c*)

	Sl. No.
Sri K. Madaiah	... 14
„ C. Rachaiah	... 29
„ H. Hanumaiah	... 55
„ V. Nanjaiah	... 63
„ M. Puttaswamy (He was recently appointed as an Amildar and his rank has to be fixed in the printed Civil List).	

NAMES OF AMILDARS WHO ARE CONFIRMED.

Sriyuts—

1 R Chandoolal
2 M Abdul Aziz
3 S Ananda Rao
4 N Krishnamurthy
5 B Munivenkataiah
6 M N Anandathirtha Rao
7 D Rudrappa
8 C S Ramaswamy
8(a) N Gopalaiah
9 G P Anantharajiah
10 T V Seshagiri Rao
11 V S Jayacharya
12 B Kallappa
13 C R Rudrappa
14 K Venkataramana Setty
15 T G Ramakrishna
16 S N Pallegar
17 G Padmaji Rao
18 M G Paramasivaiah
19 B N Nanjundappa
20 K Kalaiah
21 B S Narayan
22 T V Dasappa
23 R Thippoji Rao } Survey
24 M S Narayanaswamy } Probationers
25 T B Ethirajalu }
26 M Abdul Gaffoor
27 S Chandrasekhariah
28 Y A Jinadattaraya
29 B M Lakshmipathaiah
30 V Shankarappa
31 S Ramanna
32 V Revanna
33 T Channabasavappa

(SRI KADIDAL MANJAPPA.)

34 B Sitharaman
35 S Murugendraswami
36 S Gopalakrishnachar
37 T Hanumaiah
38 R Basavappaji
39 M R Narasinga Rao
40 T K Kannan
41 M S Rajagopala Iyengar
42 V C Munidevaiah
43 C V Krishnaswamy
44 C S Ramaswamy Iyengar
45 K Madaiah
46 P Arthur Roach
47 B Bhima Rao
48 B Mallaraj Urs
49 L Kallaiah
50 S Brahmarayappa
51 O S Mohamed Jaffer Sheriff

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ಮ ವರ್ಗದ ಅಮಲ್ದಾರ್‌ಗಳು ಎಷ್ಟು ಜನರಿಂದ ಅವರ ಕ್ಲಿಫರ್‌ಮೇಷನ್ ಬಗ್ಗೆ ಮನವಿಗಳು ತಮಗೆ ಬಂದಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಪ್ಪತ್ತೇಚೆಗೆ, ನಥ್ಯಕ್ಕೆ ಯಾವೂ ಬಂದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗೆ ಮನವಿಗಳೇನಾದರೂ ಬಂದರೆ ಅವುಗಳನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮನವಿಗಳು ಬಂದಾಕ್ಷಣಕ್ಕೇ ಹಾಗೆ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಅಗತ್ಯವಾಗಿರಬೇಕಾದ ಸೀನಿಯಾರಿಟಿ ಇರಬೇಕು, ವೇಕೆನ್ಸಿ ಇರಬೇಕು. ಇಷ್ಟೆಲ್ಲಾ ಇದ್ದರೆ ಮಾಡಲು ಸಾಧ್ಯವಾಗಬಹುದು.

ಶ್ರೀ ಜಿ. ಪುಟ್ಟಸ್ವಾಮಿ. —ಇದಕ್ಕೆ ತಾವು ತೀವ್ರವಾಗಿ ಗಮನ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಇವರ ಹೆಸರುಗಳನ್ನು ಅಸಿಸ್ಟೆಂಟ್ ಕಮಿಷನರ ಪಟ್ಟಿಯಲ್ಲಿ ಯಾವಾಗ ಸೇರಿಸುವುದಕ್ಕೆ ಪ್ರಯತ್ನಮಾಡುತ್ತೀರಿ ?

Sri Kadidal MANJAPPA.—That does not arise out of this.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗೆ ಅಸಿಸ್ಟೆಂಟ್ ಕಮಿಷನರ ಪಟ್ಟಿಗೆ ಇವರ ಹೆಸರುಗಳನ್ನು ಸೇರಿಸಬೇಕೆಂದು ಮನವಿಗಳು ಬಂದಿಲ್ಲವೇ !

ಶ್ರೀ ಕಡಿದಾಳ್ ಮಂಜಪ್ಪ.—ಬಂದಿವೆ.

ಶ್ರೀ ಜಿ. ಪುಟ್ಟಸ್ವಾಮಿ.—ಮಾಡುತ್ತೀರಾ ?

Sri Kadidal MANJAPPA.—That does not arise.

ಶ್ರೀ ಜಿ. ಪುಟ್ಟಸ್ವಾಮಿ.—ಮನವಿಗಳನ್ನು ಪರಿಶೀಲನೆ ಮಾಡುವುದು ತಮ್ಮ ಕರ್ತವ್ಯವಲ್ಲವೇ !

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಖಾಯಂ ಆದವರ ಪಟ್ಟಿಯಲ್ಲಿರುವ ಜಂಜರ್ ನಂಬರ್ 45ರಲ್ಲಿರುವವರನ್ನು ಖಾಯಂ ಮಾಡಿದ್ದು ಯಾವಾಗ ?

ಅಧ್ಯಕ್ಷರು.—ಖಾಯಂ ಆಗದೆ ಇರತಕ್ಕವರ ವಿಷಯ ನಿಮಗೆ ಬೇಕಾಗಿದೆ. ಆದುದರಿಂದ ಇನ್ನು ಎಷ್ಟು ಜನ ಖಾಯಂ ಆಗಿಲ್ಲದವರಿದ್ದಾರೆ ಎಂಬ ಬಗ್ಗೆ ಏನಾದರೂ ಒಂದು ಪಟ್ಟಿ ಮಾಡಿಕೊಂಡಿದ್ದರೆ ಅದರ ಬಗ್ಗೆ ಏನಾದರೂ ಪ್ರಶ್ನೆಗಳಿದ್ದರೆ ಕೇಳಿ. ಖಾಯಂ ಆಗಿರತಕ್ಕವರ ವಿಷಯ ಏತಕ್ಕೆ ಕೇಳುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿ.—ತಾವು ಕೊಟ್ಟಿರತಕ್ಕ ಖಾಯಂ ಅಮಲ್ದಾರರ ಪಟ್ಟಿಯಲ್ಲಿ 1953ನೆಯ ಜೂನ್ ಆಖೈರುವರೆಗೆ ಖಾಯಂ ಆಗಿರತಕ್ಕವರೆಲ್ಲರ ಹೆಸರನ್ನೂ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಎಷ್ಟು ಪ್ರಶ್ನೆ ಕೇಳಿದ್ದೀರೋ ಅಷ್ಟಕ್ಕೆ ಉತ್ತರ ಕೊಟ್ಟಿದ್ದೇವೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಗೆ ಉತ್ತರ (ಎ) ಭಾಗದ ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿದೆ ನೋಡಿ.

ಶ್ರೀ ಬಿ. ರಾಚಯ್ಯ.—ಈಗ 52 ಜನಗಳನ್ನು 1953ನೆಯ ಜೂನ್ ಆಖೈರುವರೆಗೆ ಖಾಯಂ ಮಾಡಲಾಗಿರುತ್ತೆಂದು ಹೇಳಿರತಕ್ಕದ್ದರಲ್ಲಿ ಕೇವಲ 4 ಜನರು ಮಾತ್ರ ಹರಿಜನರಿರುವುದರಿಂದ, ಇದು ಬಹಳ ಕಡಮೆ ಸಂಖ್ಯೆ ಆಯಿತಲ್ಲವೆ ?

ಅಧ್ಯಕ್ಷರು.—ಕ್ಲಿಫರ್ಮ್ ಆಗದೆ ಇರತಕ್ಕಂಥವರ ಲಿಸ್ಟ್ ಇದ್ದರೆ ಅದನ್ನಿಟ್ಟುಕೊಂಡು ಪ್ರಶ್ನೆ ಕೇಳಬಹುದಾಗಿತ್ತು. ಸುಮ್ಮನೆ ಹೀಗೆಲ್ಲಾ ಸಿಕ್ಕಿದ ಹಾಗೆ ಪ್ರಶ್ನೆ ಹಾಕುವುದರಿಂದ ಏನು ಪ್ರಯೋಜನವಾಗುತ್ತದೆ ?

ಶ್ರೀ ಬಿ. ರಾಚಯ್ಯ.—ನಥ್ಯಕ್ಕೆ ಈಗ ಯಾರನ್ನೂ ಅಮಲ್ದಾರಿ ಹುದ್ದೆಯಲ್ಲಿ ಭರ್ತಿಮಾಡಿಕೊಳ್ಳುವಂಥ ಅವಕಾಶವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ವೇಕೆನ್ಸಿ ಬಿದ್ದರೆ ಭರ್ತಿ ಮಾಡಿಕೊಳ್ಳಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಷೆಡ್ಯೂಲ್ಡ್ ತರಗತಿಗಳವರಿಗೇ ಒಂದು ಪ್ರತ್ಯೇಕವಾದ ಪಟ್ಟಿ ಇದೆಯೋ ಅಥವಾ ಎಲ್ಲಾ ಕೋಮಿನವರೂ ಸೇರಿರತಕ್ಕ ಪಟಿಯಲ್ಲೇ ಇವರ ಹೆಸರುಗಳನ್ನು ಸೇರಿಸಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರಿಗೂ ಒಂದೇ ಕಾಮನ್ ಲಿಸ್ಟ್ ಇಟ್ಟಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇವರಿಗೇ ಒಂದು ಪ್ರತ್ಯೇಕ ಲಿಸ್ಟನ್ನು ಇಟ್ಟರೆ ಅನುಕೂಲವಾಗುವುದಿಲ್ಲವೇ ?

Sri Kadidal MANJAPPA.—It is a matter of policy and a matter of opinion too.

ಶ್ರೀ ಎಚ್. ಕೆ. ಸಿದ್ದಯ್ಯ.—ಈಗ ತಾವು ತಯಾರಿಸುತ್ತಿರುವ ಅಮಲ್ದಾರರ ಪಟ್ಟಿಯಲ್ಲಿ 10 ಜನರು ಹರಿಜನರಿಗೆ ಪ್ರಾತಿನಿಧ್ಯ ದೊರೆಯುವಂತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಚ್. ಕೆ. ಸಿದ್ದಯ್ಯ.—'ನೋಟೀಸ್' ಎಂದರೆ ಏನು ಸ್ವಾಮಿ ಅದರ ಅರ್ಥ ?

ಅಧ್ಯಕ್ಷರು.—ಇನ್ನು ಬೇರೆ ಪ್ರಶ್ನೆಗಳೇನಾದರೂ ಇದ್ದರೆ ಅವುಗಳನ್ನು ಕೇಳಿ ಎಂದು ಅದರ ಅರ್ಥ (ನಗು).

ಶ್ರೀ ಪಿ. ಆರ್. ರಾಮಯ್ಯ.—ಈಗ ತಾವು ಈ ಡಿಪ್ರೆಸ್ಡ್ ಕ್ಲಾಸಿನವರನ್ನು ಅಮಲ್ದಾರಿ ಗ್ರೇಡಿಗೆ ಪ್ರಮೋಟ್‌ಮಾಡಿರುವುದರಲ್ಲಿ ಎಷ್ಟು ಜನರಿದ್ದಾರೆ ! ಹಾಗೆ ಅಮಲ್ದಾರರಾಗಿರತಕ್ಕವರ ಸಂಖ್ಯೆ ಅವರ ಪ್ರಜಾ ಸಂಖ್ಯೆಗೆ ಅನುಗುಣವಾಗಿರುತ್ತದೆಯೇ !

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಪಾಪ್ಯುಲೇಷನ್ ಬೇಸಿಸ್ ಮೇರೆಗೆ ಮಾಡುವುದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಅವರ ಪ್ರಜಾ ಸಂಖ್ಯೆಗೆ ಅನುಗುಣವಾಗಿರುವಂತೆ ಮಾಡಲು ಇನ್ನೆಷ್ಟು ದಿವಸಗಳು ಬೇಕಾಗಬಹುದು ?

Sri Kadidal MANJAPPA.—I cannot answer that question.

Land Grants to Political Sufferers of Mandya District.

Q.—**108. Sri B. P. NAGARAJA MURTHY** (Malavalli).—

Will the Government be pleased to state —

(*a*) for how many political sufferers of Mandya District lands have been given by the Government since 1947 to 1953 January ;

(*b*) the names of the political sufferers and the extent of land given to each person ;

(*c*) in how many cases the lands have been given free and in how many cases the lands have been given for price and what is the rate of price per acre in each case ?

A.—**Sri Kadidal MANJAPPA** (Minister for Revenue and Public Works).—

(*a*) Seven,

(*b*)

	Name.	*Extent.* wet. A. G.
1.	Sri M. N. Siddiah ...	6 - 0
2.	,, P. N. Javarappagowda ...	2—0
3.	,, M. Kempaiah ...	2—0
4.	,, Lingiah ...	5—0
5.	Sri Y. C. Mariyappa ...	10—0
6.	,, K. M. Linge Gowda ...	10—0
7.	,, K. Mari Gowda, Kyathanahalli.	10—0

(*c*) Free of cost in all the seven cases.

Sri B. P. NAGARAJA MURTHY.—Will the Government be pleased to state whether they have maintained any list of political sufferers ?

Sri Kadidal MANJAPPA.—The Government have not maintained any such list.

Sri B. P. NAGARAJA MURTHY.—What is the basis to determine whether a person is a political sufferer or not ?

Sri Kadidal MANJAPPA.—A person is considered to be political sufferer if he has suffered as such on account of participation in freedom struggle.

Sri B. P. NAGARAJA MURTHY — Will the Government be pleased to state whether they have fixed any maximum and minimum extent of lands to be given to the political sufferers ?

Sri Kadidal MANJAPPA.—I would like to refer the Hon'ble Member to the Government order in this connection.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈಗ ಈ ಪ್ರಶ್ನೋತ್ತರದಲ್ಲಿ ಸೂಚಿಸಿರುವ ಪ್ರಕಾರ, ತಮ್ಮ ಈ ಪಾಲಸಿಯಿಂದ ಹೆಚ್ಚಿಗೆ ಜಮೀನಿರತಕ್ಕವರಿಗೆ ಮತ್ತಷ್ಟು ಜಮೀನನ್ನು ಕೊಡರಾಗಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

* ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅವರಲ್ಲಿ ಅನೇಕರು ದೊಡ್ಡ ದೊಡ್ಡ ಜಮೀನ್ದಾರರಾಗಿದ್ದಾರೆಂದು ತಿಳಿಸಿದರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

Sri Kadidal MANJAPPA.—Notice

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಮಂಡ್ಯ ಜಿಲ್ಲೆಯಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ಲಗತ್ತಾದಂಥ ಒಂದು ಎಕರೆ ತರಿ ಜಮೀನಿಗೆ ಎಷ್ಟು ಬೆರೆಯಾಗುತ್ತದೆಂಬುದನ್ನು ತಾವು ತಿಳಿಸಬಲ್ಲಿರಾ ?

Sri Kadidal MANJAPPA.—It varies from locality to locality.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸುಮಾರು ಎಕರೆಯೊಂದಕ್ಕೆ ಒಂದು ಸಾವಿರ ರೂಪಾಯಿ ಪ್ರಕಾರ ಪ್ರತಿಯೊಬ್ಬರಿಗೂ ಹತ್ತು ಸಾವಿರದಂತೆ ಈ ಮೂವರು ಜನರಿಗೂ ಮೂವತ್ತು ಸಾವಿರ ರೂಪಾಯಿಗಳ ತನಕ ಸಹಾಯ ಮಾಡಲು ಇದರಿಂದ ಒಂದು ಅವಕಾಶವಿದೆಯಲ್ಲವೇ ?

Sri Kadidal MANJAPPA.—It is a matter of opinion.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಜಮೀನಿಲ್ಲದ ಹರಿಜನರೇನಾದರೂ ಜಮೀನುಬೇಕೆಂದು ಅಲ್ಲಿ ಅರ್ಜಿಗಳನ್ನು ಹಾಕಿಕೊಂಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

Sri B. P. NAGARAJA MURTHY.—Is it not the policy of the Government that landless Depressed Class persons who are social sufferers for centuries should be preferred to political sufferers ?

Sri Kadidal MANJAPPA.—It depends upon the circumstance of each case.